## ಪ್ರಶ್ನೋತ್ತರಗಳು

### ಅ. ಕೆಳಗೆ ನೀಡಲಾಗಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ:

**ಪ್ರಶ್ನೆ 1:**

**ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುವುದು ಯಾವಾಗ?**

**ಉತ್ತರ:**

ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುವುದು ಯುಗಾದಿಯ ದಿನ.

**ಪ್ರಶ್ನೆ 2:**

**ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೊಳ್ಳುತ್ತಾಳೆ?**

**ಉತ್ತರ:**

ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಬಗೆ ಬಗೆಯ ಬಣ್ಣಗಳಿಂದ ಬರೆದ ಚಿತ್ರದ ಹಾಗೆ ಸಿಂಗಾರಗೊಳ್ಳುತ್ತಾಳೆ.

**ಪ್ರಶ್ನೆ 3:**

**ಚೈತ್ರದಲ್ಲಿ ಯಾವುದರ ವಾಲಗ ನಡೆದಿರುತ್ತದೆ?**

**ಉತ್ತರ:**

ಚೈತ್ರದಲ್ಲಿ ನೆಲ ಮುಗಿಲ ವಾಲಗ ನಡೆದಿರುತ್ತದೆ.

**ಪ್ರಶ್ನೆ 4:**

**ಚೈತ್ರವು ಮಾಡುವ ಕೆಲಸವೇನು?**

**ಉತ್ತರ:**

ಚೈತ್ರದಲ್ಲಿ ಪ್ರಕೃತಿ ಎಲ್ಲೆಲ್ಲೂ ಹಸಿರಿನಿಂದ ಕಂಗೊಳಿಸುತ್ತದೆ. ಒಣಗಿ ನಿಂತ ಮರವು ಚಿಗುರಿ ಹಣ್ಣು ಹೂಗಳಿಂದ ಕಂಗೊಳಿಸುತ್ತದೆ.

**ಪ್ರಶ್ನೆ 5:**

**ಯುಗಾದಿಯಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ?**

**ಉತ್ತರ:**

ಯುಗಾದಿಯಲ್ಲಿ ಬೇವು ಬೆಲ್ಲ ಹಂಚುವ ಸಂಪ್ರದಾಯವಿದೆ.

ಆ. ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ:

**ಪ್ರಶ್ನೆ 1:**

**ಯುಗದ ಆದಿ ತಂದ ಸಂಭ್ರಮವೇನು?**

**ಉತ್ತರ:**

ಯುಗದ ಆದಿ ಬಂದರೆ ಪ್ರಕೃತಿಯು ನವವಧುವು ಶೃಂಗಾರಗೊಂಡಂತೆ ಕಾಣುತ್ತದೆ. ಇದರಿಂದಾಗಿ ಜಗತ್ತೆಲ್ಲ ಹೊಸ ಕಳೆಯಿಂದ ಕಂಗೊಳಿಸುತ್ತದೆ. ಎಲ್ಲೆಲ್ಲೂ ಚಿಗುರೊಡೆದ ಎಲೆಗಳಿಂದ, ಬಣ್ಣಬಣ್ಣದ ಫಲಪುಷ್ಪಗಳಿಂದ ಕಂಪನ್ನು ಸೂಸುವ ಗಿಡ-ಮರಗಳನ್ನು ಕಾಣಬಹುದಾಗಿದೆ.

**ಪ್ರಶ್ನೆ 2:**

**ಚೈತ್ರದಲ್ಲಿ ಹಕ್ಕಿಗಳ ಕಲರವ ಹೇಗಿರುತ್ತದೆಂದು ಕವಿ ವರ್ಣಿಸಿದ್ದಾರೆ?**

**ಉತ್ತರ:**

ಚೈತ್ರದಲ್ಲಿ ವೃಕ್ಷರಾಜನ ಸೌಂದರ್ಯ ಸಂತೋಷವನ್ನು ಕಂಡ ಹಕ್ಕಿಗಳು ಮುಗಿಲು ಮುಟ್ಟುವಂತೆ ಪಂಚಮ ಸ್ವರದಲ್ಲಿ ಮಧುರವಾಗಿ ಹಾಡುತ್ತವೆ. ಆಕಾಶವು ಪ್ರತಿಧ್ವನಿಸುತ್ತಿರುವಂತೆ ಕಾಣುತ್ತದೆ. ಚೈತ್ರಮಾಸದಂದು ಕೋಗಿಲೆಯು ಸ್ವರ ಮಾಧುರ್ಯದಲ್ಲಿ ಮುಕ್ತ ಕಂಠವಾಗಿ ಹಾಡುವುದನ್ನು ಕಂಡ ಇತರ ಹಕ್ಕಿಗಳು ಚಿಲಿಪಿಲಿಗುಟ್ಟುತ್ತಾ ಮತ್ತೇರಿದಂತೆ ಶಬ್ದ ಮಾಡುತ್ತವೆ.

**ಪ್ರಶ್ನೆ 3:**

**ಚೈತ್ರದಲ್ಲಿ ಪ್ರಾಣಿ ಪಕ್ಷಿಗಳ ಚಟುವಟಿಕೆಗಳು ಕವಿಗೆ ಹೇಗೆ ಗೋಚರಿಸಿದವು?**

**ಉತ್ತರ:**

ಚೈತ್ರದಲ್ಲಿ ಪ್ರಾಣಿ ಪಕ್ಷಿಗಳು ಮೈಕೊಡವಿ ಎದ್ದು, ಹೊಸ ಚೈತನ್ಯದಿಂದ ತಮ್ಮ ತಮ್ಮ ಕಾರ್ಯಗಳಿಗೆ ಸಂತಸದಿಂದ ಹಾರಿ ಹೋಗುವಂತೆ, ಹೊಸ–ಮಾಸ ಹೊಸ–ಜೀವೋಲ್ಲಾಸದಂತೆ ಕವಿಗೆ ಗೋಚರಿಸಿದವು.

**ಪ್ರಶ್ನೆ 4:**

**ಚೈತ್ರದಲ್ಲಿ ನೆಲ ಮುಗಿಲ ವಾಲಗ ನಡೆದಂತೆ ಭಾಸವಾಗುತ್ತದೆ. ಏಕೆ?**

**ಉತ್ತರ:**

ಚೈತ್ರದಲ್ಲಿ ಎಲ್ಲೆಲ್ಲೂ ಹೊಸ–ಹೊಸ ಭಾವನೆಗಳು ಕಂಡು ಬರುತ್ತವೆ. ಭೂಮಿಯ ಮೇಲಿನ ಪ್ರತಿಯೊಂದು ಜೀವಿಯಲ್ಲಿಯೂ ಹೊಸ ಚೈತನ್ಯ, ಉತ್ಸಾಹ, ಮೂಡಿ ಬಂದಿರುತ್ತದೆ. ಅವುಗಳ ಸಂತಸ ಸಂಭ್ರಮ ಹಾಡಿನ ಪ್ರತಿಧ್ವನಿಕೆಯಲ್ಲಿ ನೆಲ ಮುಗಿಲನ್ನು ಮುಟ್ಟುವಂತೆ ಭಾಸವಾಗುತ್ತದೆ.





ಇ. ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:

**ಪ್ರಶ್ನೆ 1:**

**ಚೈತ್ರದಲ್ಲಾಗುವ ಪ್ರಕೃತಿಯ ಬದಲಾವಣೆಗಳಾವುವು?**

**ಉತ್ತರ:**

ಚೈತ್ರವೆಂದರೆ ವಸಂತ, ವಸಂತ ಕಾಲದಲ್ಲಿ ಫಲಪುಷ್ಪ ಸಮೃದ್ಧವಾಗಿರುತ್ತದೆ. ಪ್ರಕೃತಿ ಹಸಿರಿನಿಂದ ಕಂಗೊಳಿಸುತ್ತಿರುತ್ತದೆ. ಜಗವೆಲ್ಲಾ ಹೊಸ ಕಳೆಯಿಂದ ತುಂಬಿರುತ್ತದೆ. ಹಸಿರಿನಿಂದ ನೆಲದಮ್ಮ ನವ ವಧುವಿನಂತೆ ಕಂಗೊಳಿಸುತ್ತಿರುತ್ತಾಳೆ. ಮರಗಿಡಗಳೆಲ್ಲ ಚಿಗುರಿ ಮುಗುಳು ನಗೆ ಬೀರಿ, ಬರಡು ಜೀವಕೆ ಹೊಸ ಚೈತನ್ಯ ನೀಡುತ್ತದೆ. ಕೋಗಿಲೆಯ ಕಂಠ ತಾರಕಕ್ಕೇರಿ ಚಿಲಿಪಿಲಿಯ ಕಲರವ ಮತ್ತೇರುತ್ತದೆ. ಚೈತ್ರದಲ್ಲಿ ಪ್ರಾಣಿ ಪಕ್ಷಿಗಳು ಮೈಕೊಡವಿ ಎದ್ದು ಹೊಸ ಚೈತನ್ಯದಿಂದ ತಮ್ಮ ತಮ್ಮ ಕಾರ್ಯಗಳಿಗೆ ಸಂತಸದಿಂದ ಹಾರಿ ಹೋಗುವಂತೆ, ಹೊಸ–ಮಾಸ ಹೊಸ–ಜೀವೋಲ್ಲಾಸದಂತೆ ಕವಿಗೆ ಗೋಚರಿಸುತ್ತದೆ. ವರ್ಷದ ಜಡತ್ವ ಎಂಬ ಕೊಳೆಯನ್ನು ತಿಕ್ಕಿ ಮೈ ತೊಳೆದಂತೆ ಒಂದೆಡೆ ಕಾಣುತ್ತಿದ್ದರೆ, ಮತ್ತೊಂದೆಡೆ ಎಲ್ಲರ ಮುಖದಲ್ಲೂ ನಗುವು ಹೊರಹೊಮ್ಮುತ್ತದೆ.

**ಪ್ರಶ್ನೆ 2:**

**ಕವಿ ಯುಗದ ಆದಿಯನ್ನು ಸವಿಚೈತ್ರ ಎಂದು ಏಕೆ ಬಣ್ಣಿಸಿದ್ದಾರೆ?**

**ಉತ್ತರ:**

ಯುಗಾದಿಯ ಹೊಸದಿನವು ಚೈತ್ರದ ಸವಿಕೊಡುಗೆಯಾಗಿ ಮೂಡಿ ಬಂದಿದೆ. ಯುಗಾದಿಯ ದಿನ ಮೈಯ ಕೊಳೆಯೆಲ್ಲಾ ತಿಕ್ಕಿ ತಿಕ್ಕಿ ತೆಗೆಯುವಂತೆ ಮನಸ್ಸಿನ ನೋವಿನ ದುಃಖದ ಭಾವನೆಗಳೆಲ್ಲವನ್ನು ತೊಡೆದು ಹಾಕಿ ಎಲ್ಲರೂ ಬೆಲ್ಲದ ಸವಿ ಸವಿಯಲು ಕಹಿಯೆಲ್ಲಾ ಕಳೆದು ಎಲ್ಲರ ಎದೆಯಲ್ಲಿ ಸವಿಯ ಚೈತ್ರ ಮೂಡಿ ಬರುತ್ತದೆ. ಯುಗಾದಿಯಂದು ಬೇವು ಬೆಲ್ಲವನ್ನು ತಿಂದು, ಬರಲಿರುವ ಸುಖ ದುಃಖಗಳನ್ನು ಸಮಾನವಾಗಿ ಸ್ವೀಕರಿಸುವ ಸಂಕಲ್ಪಮಾಡುವ ಆಚರಣೆ ಚೈತ್ರದ ಮೊದಲ ದಿನವಾಗಿರುತ್ತದೆ. 'ಯುಗಾದಿ'ಯ ಹೆಸರಿನಲ್ಲಿ ಬೇವು ಬೆಲ್ಲ

ತಿನ್ನುತ್ತಾ ಸಂತೋಷದಿಂದ ಸವಿಮಾತುಗಳನ್ನಾಡುತ್ತಾ ದಿನ ಕಳೆಯಲಾಗುತ್ತದೆ. ಅದರೊಂದಿಗೆ ಪ್ರಕೃತಿಯ ಸೊಬಗು ಎಲ್ಲೆಲ್ಲೂ ಚಿಗುರೊಡೆದು ಫಲಪುಷ್ಪ ಪತ್ರಗಳಿಂದ ತುಂಬಿದ ಮರಗಳು ಮುಗುಳ್ನಗುತ್ತಾ ಮುತ್ತಿಡುತ್ತಿರುವಂತೆ ತೋರುತ್ತಿದ್ದರೆ, ಕೋಗಿಲೆಯ ಮಧುರ ಧ್ವನಿ, ಹಕ್ಕಿಗಳ ಇಂಚರ ಮನಸ್ಸಿಗೆ ಸವಿಯಾದ ಮುದವನ್ನು ನೀಡುತ್ತಿರುತ್ತದೆ.

### ಈ. ಸಂದರ್ಭದೊಡನೆ ವಿವರಿಸಿ:

**1. ನೆಲದಮ್ಮ ನವವಧುವೆ ಆದಳಿಂತು!**

**ಉತ್ತರ:** ಈ ವಾಕ್ಯವನ್ನು 'ಬಸವರಾಜ ಸಾದರ'ರವರು ಬರೆದಿರುವ 'ಸಿಸಿಫಸರ ಸುತ್ತು' ಎಂಬ ಕವನ ಸಂಕಲನದಿಂದ ಆರಿಸಿರುವ 'ಸವಿಚೈತ್ರ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಚೈತ್ರ ಮಾಸದಲ್ಲಿ ಆಗುವ ಪ್ರಕೃತಿ ಬದಲಾವಣೆಯಿಂದ ಭೂಮಿತಾಯಿ ಹೇಗೆ ಕಾಣುತ್ತಾಳೆ ಎಂಬುದನ್ನು ಕುರಿತು ಕವಿ ಹೇಳುವಾಗ ಮೇಲಿನ ಮಾತು ಬಂದಿದೆ.

**ವಿವರಣೆ:** ಯುಗದ ಆದಿಯು ಸೊಗದ ಸುಗ್ಗಿಯನ್ನು ತರುತ್ತದೆ. ಇದರಿಂದಾಗಿ ಜಗತ್ತೆಲ್ಲ ಹೊಸ ಕಳೆಯಿಂದ ಕಂಗೊಳಿಸುತ್ತದೆ. ಎಲ್ಲೆಲ್ಲೂ ಚಿಗುರೊಡೆದ ಎಲೆಗಳಿಂದ, ಬಣ್ಣಬಣ್ಣದ ಫಲಪುಷ್ಪಗಳಿಂದ ಕಂಪನ್ನು ಸೂಸುವ ಗಿಡ–ಮರಗಳನ್ನು ಕಾಣಬಹುದಾಗಿರುತ್ತದೆ. ಜಗಕೆಲ್ಲ ಹೊಸ ಕಳೆಯು ತುಂಬಿ ಬಗೆಬಗೆಯ ಬಣ್ಣಗಳ ಬರೆದ ಚೈತ್ರದ ಹಾಗೆ ನೆಲದಮ್ಮ ನವ ವಧುವೆ ಆದಳು ಎಂದು ಚೈತ್ರಮಾಸದ ಸೌಂದರ್ಯವನ್ನು ವರ್ಣಿಸಲಾಗಿದೆ.

**ವಿಶೇಷತೆ:** ಯುಗದ ಆದಿಯಲ್ಲಿ ಭೂಮಿತಾಯಿಯು ಕಾಣುವ ಬಗೆಯನ್ನು ಇಲ್ಲಿ ಚಿತ್ರಿಸಲಾಗಿದೆ.

**2. ನೆಲ ಮುಗಿಲ ವಾಲಗವೆ ನಡೆದಂತಿದೆ.**

**ಉತ್ತರ:** ಈ ವಾಕ್ಯವನ್ನು 'ಬಸವರಾಜ ಸಾದರ'ರವರು ಬರೆದಿರುವ 'ಸಿಸಿಫಸರ ಸುತ್ತು' ಎಂಬ ಕವನ ಸಂಕಲನದಿಂದ ಆರಿಸಿರುವ 'ಸವಿಚೈತ್ರ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಎಲ್ಲೆಲ್ಲೂ ಪ್ರಾಣಿ ಪಕ್ಷಿಗಳು ಮೈಕೊಡವಿ ಎದ್ದು ಹೊಸ ಚೈತನ್ಯದಿಂದ ತಮ್ಮ ತಮ್ಮ ಕಾರ್ಯಗಳಿಗೆ ಸಂತಸದಿಂದ ಹಾರಿ ಹೋಗುವುದನ್ನು ಕುರಿತು ಹೇಳುವ ಸಂದರ್ಭದಲ್ಲಿ ಕವಿ ಮೇಲಿನ ಮಾತನ್ನು ಹೇಳಿದ್ದಾರೆ.

**ವಿವರಣೆ:** ಚೈತ್ರ ಮಾಸದಲ್ಲಿ ಎಲ್ಲೆಲ್ಲೂ ಹೊಸ ಹೊಸ ಭಾವನೆಗಳು ಕಂಡು ಬರುತ್ತವೆ. ಭೂಮಿಯ ಮೇಲಿನ ಪ್ರತಿಯೊಂದು ಜೀವಿಯಲ್ಲಿಯೂ ಹೊಸ ಚೈತನ್ಯ ಉತ್ಸಾಹ ಮೂಡಿ ಬಂದಿರುತ್ತದೆ. ಅವರ ಸಂತಸ, ಸಂಭ್ರಮ ಅವುಗಳ ಹಾಡಿನ ಪ್ರತಿಧ್ವನಿಕೆಯಲ್ಲಿ ನೆಲ ಮುಗಿಲನ್ನು ಮುಟ್ಟಿದೆಯೆಂದು ಕವಿ ವರ್ಣಿಸಿದ್ದಾರೆ.

**ವಿಶೇಷತೆ:** ಹೊಸ–ಮಾಸ ಹೊಸ–ಜೀವೋಲ್ಲಾಸ ಎಂಬುದು ಈ ಸಂದರ್ಭದ ವೈಶಿಷ್ಟ್ಯವಾಗಿದೆ.

**3. ಎಲ್ಲರೆದೆಗಳ ತುಂಬ ಸವಿಚೈತ್ರವು.**

**ಉತ್ತರ:** ಈ ವಾಕ್ಯವನ್ನು 'ಬಸವರಾಜ ಸಾದರ' ರವರು ಬರೆದಿರುವ 'ಸಿಸಿಫಸರ ಸುತ್ತು' ಎಂಬ ಕವನ ಸಂಕಲನದಿಂದ ಆರಿಸಿರುವ 'ಸವಿಚೈತ್ರ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಯುಗಾದಿಯ ಹೊಸ ವರುಷದ ಆಚರಣೆಯ ಬಗ್ಗೆ ವಿವರಿಸುವ ಸಂದರ್ಭದಲ್ಲಿ ಕವಿ ಮೇಲಿನ ಮಾತನ್ನು ಹೇಳಿದ್ದಾರೆ.

**ವಿವರಣೆ:** ಯುಗಾದಿಯ ಹೊಸ ವರುಷದಂದು ಹಿಂದಿನ ಕಹಿ ನೆನಪುಗಳನ್ನೆಲ್ಲಾ ತಿಕ್ಕಿ, ಕೊಳೆ ತೆಗೆದಂತೆ ಅವೆಲ್ಲವನ್ನು ಮರೆತು ಬೆಲ್ಲದ ಸವಿಯ ಸಿಹಿಯನ್ನು ಸವಿದಂತೆ, ಚೈತ್ರ ಮಾಸವು ಎಲ್ಲರ ಮನಸ್ಸಿನಲ್ಲಿಯೂ ಸಿಹಿ ಭಾವನೆಗಳನ್ನು ಸವಿಯುವಂತೆ ಎಲ್ಲರಿಗೂ ಸವಿಚೈತ್ರವಾಗಿ ಮೂಡಲಿ ಎಂದು ಕವಿಯು ಆಶಿಸಿದ್ದಾರೆ.

**ವಿಶೇಷತೆ:** ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಲಿ, ಎಲ್ಲರ ಎದೆಯಲ್ಲಿ ಸವಿಚೈತ್ರ ತುಂಬಲಿ ಎನ್ನುವ ಕವಿಯ ಮಾತು ವಿಶೇಷವಾಗಿದೆ.



# DSERT SOLUTIONS

VIDWATH™ INNOVATIVE SOLUTIONS PVT. LTD



## ಭಾಷಾಭ್ಯಾಸ

### ಅ. ಕೆಳಗಿನ ಪದಗಳನ್ನು ವಿಗ್ರಹವಾಕ್ಯ ಮಾಡಿ, ಸಮಾಸದ ಹೆಸರು ತಿಳಿಸಿರಿ:

**ಅ. ಯುಗಾದಿ** = ಯುಗದ + ಆದಿ = ತತ್ಪುರುಷ ಸಮಾಸ

**ಆ. ಮೈಕೊಡವಿ** = ಮೈಯನ್ನು + ಕೊಡವಿ = ಕ್ರಿಯಾಸಮಾಸ

**ಇ. ಸವಿಚೈತ್ರ** = ಸವಿ + ಚೈತ್ರ = ಕರ್ಮಧಾರೆಯ ಸಮಾಸ

**ಈ. ನೆಲಮುಗಿಲು** = ನೆಲದ + ಮುಗಿಲು = ತತ್ಪುರುಷ ಸಮಾಸ

### ಆ. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿರಿ:

**ಅ. ಆದಳಿಂತು** = ಆದಳು + ಇಂತು = ಲೋಪಸಂಧಿ

**ಆ. ಜೀವೋಲ್ಲಾಸ** = ಜೀವ + ಉಲ್ಲಾಸ = ಗುಣಸಂಧಿ

**ಇ. ಎಲ್ಲರೆದೆ** = ಎಲ್ಲರ + ಎದೆ = ಲೋಪಸಂಧಿ

**ಈ. ನೆಲದಮ್ಮ** = ನೆಲದ + ಅಮ್ಮ = ಗುಣಸಂಧಿ

### ಇ. ಕೆಳಗಿನ ಪದಗಳಿಗೆ ತತ್ಸಮ–ತದ್ಭವ ರೂಪ ಬರೆಯಿರಿ:

**ಅ. ಮುಖ** = ಮೊಗ

**ಆ. ಪಕ್ಷಿ** = ಹಕ್ಕಿ

**ಇ. ಬಣ್ಣ** = ವರ್ಣ

**ಈ. ಖಗ** = ಪಕ್ಷಿ





**ಈ. ಕೆಳಗಿನ ಪದಗಳಿಗೆ ವಿರುದ್ಧಾರ್ಥಗಳನ್ನು ಬರೆಯಿರಿ:**

**ಅ. ಸಿಹಿ** × ಕಹಿ

**ಆ. ಆದಿ** × ಅಂತ್ಯ

**ಇ. ನೆಲ** × ಮುಗಿಲು

**ಈ. ಹೊಸತು** × ಹಳತು

**ಉ. ತುದಿ** × ಮೊದಲು